

# ಭಾರೀ ಪೈಪ್!

ತಂಬಾಕನ್ನು ಹೇಗೆಲ್ಲ ಸೇದಬಹುದು ಎಂದು ಅದರ ವೈವಿಧ್ಯಗಳನ್ನು ಜಗತ್ತಿಗೆ ನೀಡಿದವರಲ್ಲಿ ಪಾಶ್ಚಾತ್ಯರು ಪ್ರಮುಖರು. ತಂಬಾಕು ಆರೋಗ್ಯಕ್ಕೆ ಹಾನಿಕರವೆಂಬ ಎಚ್ಚರಿಕೆಯನ್ನು ಪ್ಯಾಕೆಟಿನಲ್ಲಿ ಮುದ್ರಿಸಿದರೂ ಅದರಿಂದ ಬರುವ ರೋಗದ ಅರಿವಿದ್ದರೂ ಧೂಮಪಾನದ ಬಳಕೆ ಕಡಮೆಯಾಗಿಲ್ಲ. ಫ್ಲೋರಿಡಾದ ಜುವಾನ್ ಪಾನೆಸ್ಸೋ ಎಂಬಾತ ಇದೀಗ ಒಂದು ಬಲು ದೊಡ್ಡ ಸಿಗರೇಟನ್ನು ತಯಾರಿಸಿದ್ದಾನೆ. ಇದು 19 ಮೀಟರ್ ಉದ್ದವಿದೆ. ಅದರ ಸುತ್ತಳತೆ ಮೂರು ಮೀಟರ್. 725 ಪೌಂಡ್ ಭಾರ ತೂಗುವ ಅದರಲ್ಲಿ ಹದಿನಾರು ಸಾವಿರ ತಂಬಾಕಿನ ಎಲೆಗಳಿವೆ. ಇದರ ಮಾರಾಟ ಬೆಲೆ 1.85 ಲಕ್ಷ ಡಾಲರು ಮಾತ್ರ ಎನ್ನುತ್ತಾನೆ ಆತ. ಹಾಗೆಂದು ಜಗತ್ತಿನಲ್ಲೇ ದೊಡ್ಡದೆಂಬ ದಾಖಲೆ ನನ್ನದಲ್ಲ, 2005ರಲ್ಲಿ ಪೋರ್ಟೋರಿಕೋದ ರೈತ ಪ್ಯಾಟ್ರಿಕ್ ವೇನ್ 62 ಅಡಿ ಉದ್ದದ ಸಿಗರೇಟ್ ತಯಾರಿಸಿ ಗಿನ್ನೆಸ್ ದಾಖಲೆ ಮಾಡಿದ್ದನೆಂಬುದನ್ನು ಒಪ್ಪಿಕೊಳ್ಳುತ್ತಾನೆ.

ಇದೊಂದು ಗಾಂಜಾ ಸೇವಿಸುವ ಪೈಪ್. ಇರ್ವಿನ್ ರೋಸೆನ್ ಫೆಲ್ಡ್ ಎಂಬವನು ಇಂಥ ಬೃಹತ್ ಪೈಪನ್ನು ತಯಾರಿಸಿದ್ದಷ್ಟೇ ಅಲ್ಲ, ಶ್ರಮಪಟ್ಟು ಅದರಲ್ಲಿ ಗಾಂಜಾದ ಹೊಗೆಯನ್ನೂ ಸೇವಿಸುತ್ತಾನೆ.

ಮೂರನೆಯದು ಬ್ರಿಟನ್ನಿನ ಸೇಂಟ್‌ಕ್ಲೌಡ್ ಪಟ್ಟಣದ ಸೆರೆಮನೆಯ ಹೊರಭಾಗದಲ್ಲಿ ಕಾಣಬರುವ ಧೂಮಪಾನದ ಭಾರೀ ಕೊಳವೆ. ಐದು ಅಡಿ ಎತ್ತರ, ಇಪ್ಪತ್ತು ಅಡಿ ಉದ್ದವಾಗಿದ್ದು 157 ಪೌಂಡ್ ಭಾರವೂ ಇದೆ. ಇದರ ವ್ಯಾಸ 8. 6 ಅಡಿಗಳಷ್ಟಿದೆ. ಜಗತ್ತಿನ ಅತಿ ಚಿಕ್ಕದೆನಿಸಿದ ಇಂತಹ ಪೈಪ್ ಡೈಮಂಡ್ ಮ್ಯೂಸಿಯಮ್‌ನಲ್ಲಿದೆ. ಧೂಮಪಾನದ ಸಲಕರಣೆಗಳ ಅತಿ ದೊಡ್ಡ ಸಂಗ್ರಹಾಲಯವೊಂದು ಆ್ಯಮ್‌ಸ್ಟರ್‌ಡಾಮ್ ನಗರದಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

★ ರಾಮಕೃಷ್ಣ

